International Journal of Applied Research 2015; 1(11): 207-212



International Journal of Applied Research

**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2015; 1(11): 207-212
www.allresearchjournal.com
Received: 28-08-2015
Accepted: 30-09-2015

**Sardar Rayappa soppi**
Research Scaler,
Dept of Journalism and Mass Communication,
Gulbarga University
Kalaburagi.

**Correspondence**
**Sardar Rayappa soppi**
Research Scaler,
Dept of Journalism and Mass Communication,
Gulbarga University
Kalaburagi.

# ಬೀದರ ಜಿಲ್ಲೆಯ ಪತ್ರಿಕೋದ್ಯಮ

**Sardar Rayappa soppi**

ಕರ್ನಾಟಕದ ಉತ್ತರದ ಉತ್ತುಂಗದಲ್ಲಿರುವ ಬೀದರ್ ಒಂದಕ್ಕಿಂತ ಹೆಚ್ಚು ಕಾರಣಗಳಿಂದಾಗಿ ವೈಶಿಷ್ಟ್ಯಪೂರ್ಣವಾಗಿದೆ. ರಾಜ್ಯದ ಮುಕುಟಮಣಿಯಂತಿರುವ ಬೀದರ್ ಜಿಲ್ಲೆ ಪ್ರಧಾನವಾಗಿ ಬಹುಧರ್ಮಿಯ, ಬಹುಭಾಷೀಯ, ಬಹುಜನಾಂಗೀಯ ಮತ್ತು ಅವೆಲ್ಲಕ್ಕೂ ಮಿಗಿಲಾಗಿ ಬಹುಸಂಸ್ಕೃತಿಯ ಬೀಡಾಗಿದೆ. ಬಹುಭಾಷೀಯ ಪ್ರಭಾವದಿಂದಾಗಿ ಇಲ್ಲಿಯ ಕನ್ನಡ ಕರ್ನಾಟಕದ ಇತರ ಭಾಗದ ಕನ್ನಡ ಶೈಲಿಗಿಂತ ಭಿನ್ನವಾಗಿದೆ. ಸ್ವಾತಂತ್ರ್ಯಕ್ಕೆ ಮುಂಚೆ ಕರ್ನಾಟಕದ ಏಕೀಕರಣದ ಪೂರ್ವದಲ್ಲಿ ಮತ್ತು ಹೈದ್ರಾಬಾದ್ ವಿಮೋಚನೆಗೆ ಮುನ್ನ ಬೀದರ್ ಜಿಲ್ಲೆ ಹೈದ್ರಾಬಾದ್ ನಿಜಾಂರ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತ್ತು. ಬೀದರ್ ಒಂದು ಸುಪ್ರಸಿದ್ಧ ಐತಿಹಾಸಿಕ ಮತ್ತು ಸಾಂಸ್ಕೃತಿಕ ನಗರ. ಮಹಾಭಾರತದಲ್ಲಿ ಪ್ರಸ್ತಾಪಿಸಲಾಗಿರುವ 'ವಿದುರಾ ನಗರಿ' ಬೀದರ್ ಎಂದೇ ಹೇಳಲಾಗಿದೆ. ಹಿಂದೂ-ಇಸ್ಲಾಂ-ಸಿಖ್ ಧರ್ಮಗಳ ತ್ರಿವೇಣಿ ಸಂಗಮ ಇದಾಗಿದೆ. ಸಿಖರ ಪರಮ ಗುರು ನಾನಕರ ಸ್ವತಃ ಬೀದರಿಗೆ ಭೇಟಿ ನೀಡಿ ತಮ್ಮ ವಿಶೇಷ ತಪಃಶಕ್ತಿಯಿಂದ ಅಂತರ್ಜಲ ಶೋಧಿಸಿದರೆಂಬ ಪ್ರತೀತಿ ಇದೆ. ಈ ಕಾರಣಕ್ಕಾಗಿಯೇ ಬೀದರನಲ್ಲಿರುವ ಗುರುದ್ವಾರ ಭಾರತದ ಐದು ಪವಿತ್ರ ಗುರುದ್ವಾರಗಳಲ್ಲಿ ಒಂದಾಗಿದೆ. ಈ ಗುರುದ್ವಾರಲ್ಲಿ ಈಗಲೂ ನಿರಂತರವಾಗಿ ಹರಿಯುತ್ತಿರುವ ಅಂತರ್ಜಲದ ಸೆಲೆಯನ್ನು ಅಮೃತ ಕುಂಡ ಎಂದು ಕರೆಯಲಾಗುತ್ತದೆ.

ಕ್ರಿ.ಶ. ಪೂರ್ವ ಮೂರನೇ ಶತಮಾನದಲ್ಲಿ ಅಶೋಕ ಮಹಾರಾಜನ ಆಳ್ವಿಕೆಗೆ ಒಳಪಟ್ಟಿದ್ದ ಬೀದರ್ ಪ್ರದೇಶ ನಂತರ ಶಾತವಾಹನರು, ವಾಕಟಾಕರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ಕಲಬುರ್ಗಿಯ ಬಹುಮನಿ ಸುಲ್ತಾನರು ಮತ್ತು ಕೊನೆಯಲ್ಲಿ ಹೈದ್ರಾಬಾದಿನ ನಿಜಾಂರ ಆಳ್ವಿಕೆಗೆ ಒಳಪಟ್ಟು ಇತಿಹಾಸದಲ್ಲಿ ಅನೇಕ ಏಳುಬೀಳುಗಳನ್ನು ಕಂಡ ಪ್ರದೇಶವಾಗಿದೆ.

ಚಾಲುಕ್ಯ ವಂಶದ ಜಗದೇಕಮಲ್ಲ ಎರಡನೇ ಜಯಸಿಂಹನು ಕ್ರಿ.ಶ.1033ರ ಹೊತ್ತಿಗೆ ತನ್ನ ರಾಜಧಾನಿ ಸ್ಥಳವನ್ನು ಕಲ್ಯಾಣಕ್ಕೆ ವರ್ಗಾಯಿಸಿದ ಮೇಲೆ ಈ ಸ್ಥಳಕ್ಕೆ ಮತ್ತಷ್ಟು ಪ್ರಾಮುಖ್ಯತೆ ಪ್ರಾಪ್ತವಾಯಿತು.

ಕಲ್ಯಾಣಿ ಚಾಲುಕ್ಯರ ಸಾಮ್ರಾಟ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಪ್ರಾಯಃ ಈ ಪ್ರದೇಶ 'ನ ಭೂತೋ ನ ಭವಿಷ್ಯತ್' ಎನ್ನುವ ರೀತಿಯ ವೈಭವವನ್ನು ಕಂಡ ಪ್ರದೇಶವಾಗಿದೆ. ಭಾರತೀಯ ನ್ಯಾಯ ಶಾಸ್ತ್ರ ಬೆಳವಣಿಗೆಯ ಆಧಾರ ಗ್ರಂಥವಾಗಿರುವ ವಿಜ್ಞಾನೇಶ್ವರನ 'ಮಿತಾಕ್ಷರ' ಮತ್ತು ಕಾಶ್ಮೀರದಿಂದವಲಸೆ ಬಂದು ವಿಕ್ರಮಾದಿತ್ಯನ ಸಾಮ್ರಾಜ್ಯದಲ್ಲಿ ಆಸ್ಥಾನ ಕವಿಯ ಸ್ಥಾನವನ್ನಲಂಕರಿಸಿದ ಬಿಲ್ಹಣ ವಿರಚಿತ 'ವಿಕ್ರಮಾಂತ ದೇವ ಚರಿತ' ಎರಡು ಅತ್ಯಂತ ಮಹತ್ವದ ಕೃತಿಗಳು ರಚನೆಯಾದದ್ದು ಈ ಸಾಮ್ರಾಜ್ಯದ ಸಂದರ್ಭದಲ್ಲೇ. ವಿಶ್ವದ ಕೆಲವೇ ವೈಭವೋಪೇತ ಸಾಮ್ರಾಜ್ಯಗಳಲ್ಲಿ ಒಂದಾದ ಆರನೇ ವಿಕ್ರಾಮಾದಿತ್ಯನ ಆಳ್ವಿಕೆಯ ರಾಜಧಾನಿ ಕಲ್ಯಾಣದಿಂದಾಗಿ ಬೀದರಿಗೆ ವಿಶೇಷ ಐತಿಹಾಸಿಕ ಗೌರವ ಸಲ್ಲುತ್ತದೆ.

ಕ್ರಿ.ಶ. 1429ರಲ್ಲಿ ಬಹುಮನಿ ಸುಲ್ತಾನರು ತಮ್ಮ ರಾಜಧಾನಿಯನ್ನು ಗುಲ್ಬರ್ಗದಿಂದ ಬೀದರಿಗೆ ಸ್ಥಳಾಂತರಿಸಿದ ಮೇಲೆ ಇತಿಹಾಸದ ಮತ್ತೊಂದು ಅಧ್ಯಾಯ ಪ್ರಾರಂಭವಾಗುತ್ತದೆ. ಕ್ರಿ.ಶ. 1527 ರಿಂದ 1619ರವರೆಗೆ ಬೀದರ್ ಬರೀದ್ ಶಾಹಿ ರಾಜವಂಶದ ರಾಜಧಾನಿಯಾಗಿ ಮೆರೆದಿದೆ. ಅಸಫ ಜಹ ಎನ್ನುವ ಮೊಗಲರ ಸೇನಾಧಿಪತಿ ಬೀದರ್ ಸುಭೆದಾರನೆಂದು ನೇಮಕಗೊಂಡು ಕೆಲವು ಕಾಲದ ನಂತರ ಈ ಭಾಗಕ್ಕೆ 'ನಿಜಾಂ-ಉಲ್-ಮುಲ್ಕ್' ಎಂದು ಹೆಸರನ್ನಿಟ್ಟು ಹೈದ್ರಾಬಾದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳತೊಡಗಿದ.

ಮಹಾಮಾನವತಾವಾದಿ ಸಮಾಜ ಸುಧಾರಕ ಹಾಗೂ ಸಮಾನತೆಯ ಕ್ರಾಂತಿ ಪುರುಷ ಬಸವಣ್ಣನವರ ನೇತೃತ್ವದಲ್ಲಿ 12ನೇ ಶತಮಾನದಲ್ಲಿ ಭಾರತದ ಸಂದರ್ಭದಲ್ಲಿಯೇ ವಿಶಿಷ್ಟ ಪೂರ್ವವಾದ ಸಾಮಾಜಿಕ ಕ್ರಾಂತಿ ನಡೆದದ್ದು ಈ ನೆಲದಲ್ಲಿ. ಅನುಭವ ಮಂಟಪದ ಮೂಲಕ ಅನೇಕ ಶಿವಶರಣರು ಓತಪ್ರೋತವಾಗಿ ನಿರ್ಮಿಸಿದ ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಒಂದು ಪ್ರಧಾನ ಅಂಗವಾಗಿದೆ.

ಮಿತಾಕ್ಷರದಿಂದ ಸಂಪರ್ಕ ಸಂವಹನ ಈ ಎಲ್ಲಾ ಐತಿಹಾಸಿಕ ಬೆಳವಂಇಗೆಗಳನ್ನು ಗಮನಿಸಿದರೆ ಬೀದರ ಪ್ರದೇಶದಲ್ಲಿ ಲಾಗಾಯ್ತಿನಿಂದಲೂ ಸಮೂಹ ಸಂಪರ್ಕ ಮಾಧ್ಯಮದ ಬೆಳವಣಿಗೆ ಚೆನ್ನಾಗಿಯೇ ಆಗಿತ್ತು ಎಂದು ಊಹಿಸಬಹುದು. ವಚನಕಾರರು ತಮ್ಮ ನಿರ್ಭೀತ ಮನೋಭಾವದ ವಚನಗಳ ಮೂಲಕ ಒರ್ವ ಪ್ರಾಮಾಣಿಕ, ದಿಟ್ಟ ಪತ್ರಕರ್ತ ಮಾಡಬೇಕಾದ ಕೆಲಸವನ್ನೇ ಮಾಡಿದ್ದಾರೆ. ವಿಕ್ರಮಾದಿತ್ಯನ ಕಾಲವನ್ನು ಸುವರ್ಣ ಯುಗವೆಂದು ಇತಿಹಾಸಕಾರರು ಕರೆದಿದ್ದು ಈ ಸುವರ್ಣ ಯುಗದ ನಿರ್ಮಾಣಕ್ಕೆ ಅಂದಿನ ಸ್ವರೂಪದ ಮಾಧ್ಯಮಗಳು ಕಾಣೀಕೆಯನ್ನು ನೀಡಿರಲೇಬೇಕು.

ವಿಜ್ಞಾನೇಶ್ವರರು ರಚಿಸಿದ 'ಮಿತಾಕ್ಷರ' 11–12ನೆ ಯ ಶತಮಾನದ ಕಾಲದಲ್ಲಿ ಇಡಿ ಭರತ ಖಂಡದ ತುಂಬೆಲ್ಲ ಪಸರಿಸಿ ಜನಮೆಚ್ಚುಗೆಯನ್ನು, ಒಪ್ಪಿಗೆಯನ್ನು ಪಡೆದದ್ದು ವಿಸ್ಮಯಕಾರಿಯಾಗಿದೆ. ಬಂಗಾಲ ಪ್ರಾಂತವೊಂದನ್ನು ಹೊರತು ಪಡಿಸಿ ಇಡೀ ದೇಶದಾದ್ಯಂತ ಜಾರಿಯಲ್ಲಿದ್ದ ಏಕೈಕ ನ್ಯಾಯಪದ್ದತಿ ಎಂದರೆ ಮಿತಾಕ್ಷರ ನ್ಯಾಯಪದ್ಧತಿ. ಕಲ್ಯಾಣ ಸಾಮ್ರಾಜ್ಯದಲ್ಲಿ ಜನ್ಮತೆಳೆದ ಮಿತಾಕ್ಷರ ಅತ್ಯಂತ ವ್ಯಾಪಕ ಇಸ್ತಾರವುಳ್ಳ ಭರತ ಖಂಡದಾದ್ಯಂತ ಪಸರಿಸಿದನ್ನು ನೋಡಿದರೆ ಆ ಕಾಲದ ಸಮೂಹ–ಸಂಪರ್ಕ ಮಾಧ್ಯಮಗಳು ಸದೆಷ್ಟು ಕ್ರಿಯಾಶೀಲವಾಗಿದ್ದವೆಂಬುವುದನ್ನು ಊಹಿಸಬಹುದು. ಅಂದಿನ ಸಂಪರ್ಕ ವ್ಯವಸ್ಥೆಯೆಲ್ಲ ಪ್ರಾಯಶ ವ್ಯಕ್ತಿಯಿಂದ ವ್ಯಕ್ತಿಗೆ ತಲುಪಿಸುವಂತಹುದೆ ಆಗಿತ್ತು. ಸನ್ಯಾಸ ಸ್ವೀಕರಿಸಿದ ಅನೇಕರು ಒಂದೇಕಡೆ ನೆಲೆಸದೆ ಒಂದು ಸ್ಥಳದೊಂದ ಮತ್ತೊಂದು ಸ್ಥಳಕ್ಕೆ ಅಲೆದಾಡುತ್ತ ಆಯಾ ಪ್ರದೇಶದ ವೈಶೀಷ್ಟ್ಯಯ ಹಿರಿಮೆ–ಗರಿಮೆಗಳನ್ನು ಪ್ರಚಾರ ಮಾಡುತಿದ್ದರೆಂದು ಕಂಡುಬರುತ್ತದೆ. ಈಗಿನಂತೆ ವೇಗವಾದ ಸಂಚಾರ, ಸಂಪರ್ಕ ಸಾಧನಗಳು ಯಾವೂ ಇಲ್ಲದ ಇದ್ದ ಕಾಲದಲ್ಲಿ ವಿಕ್ರಮಾದಿತ್ಯನ ಸಾಮ್ರಾಜ್ಯದ ಕೀರ್ತಿಗೆ ಮರುಳಾಗಿ ಬಿಲ್ಹಣ ಕವಿ ಕಾಶ್ಮೀರದಿಂದ ಕಲ್ಯಾಣಕ್ಕೆ ಧಾವಿಸಿದ್ದು ಮತ್ತು 'ಮಿತಾಕ್ಷರ' ಗ್ರಂಥ ಭಾರತದ ಉಪಖಂಡದ ತುಂಬೆಲ್ಲ ಹಬ್ಬಿದ್ದು ಆಶ್ಚರ್ಯಕರವಾಗಿದೆ.

ಬೀದರ ಜಿಲ್ಲೆ ಅನ್ಯ ಭಾಷಗಳ ವಿಪರೀತ ಪ್ರಭಾವಕ್ಕೆ ಒಳಗಾದದ್ದು ಒಂದು ವಿಶೇಷ. 1905ಕ್ಕೆ ಮುಂಚೆ ಬೀದರ ಜಿಲ್ಲೆಯ ಕೋಹಿರ, ಜನವಾಡ, ಒಔರಾದ, ಉದಗೀರ, ಅಹ್ಮದಪುರ ಮತ್ತು ನಿಲಂಗಾ ತಾಲೂಕಗಳನ್ನು ಒಳಗೊಂಡಿತ್ತು. 1950ರ ಹೈದ್ರಾಬಾದ್ ಜಹಗೀರು ರದ್ಧತಿ ಕಾಯ್ದೆ ಪ್ರಕಾರ ಜಿಲ್ಲೆ ಪುನರವಿಂಗಡಣೆಗೊಂಡಿತು. ಇದರ ಪ್ರಕಾರ ಬೀದರ, ಬಾಲ್ಕಿ, ಹುಮನಾಬಾದ, ಔರಾದ, ನಿಲಾಂಗ, ಅಹ್ಮದಪುರ, ಉದಗೀರ, ಜಾಹಿರಾಬಾದ ಮತ್ತು ನಾರಾಯಣಖೇಡ ಎಂಬ ಒಂಭತ್ತು ತಾಲೂಕುಗಳನ್ನು ಒಳಗೊಂಡು ಬವಗೋಳೀಕವಾಗಿ ಸಾಕಷ್ಟು ದೊಡ್ಡ ಜಿಲ್ಲೆಯಾಗಿತ್ತು.

ಭಾಷಾವಾರು ಪ್ರಾಂತ ರಚವೆಯಾದ ನಂತರ ನಿಲಾಂಗ, ಅಹ್ಮದಪುರ, ಉದಗೀರ ಮಹಾರಾಷ್ಟ್ರಕ್ಕೂ: ಜಹಿರಾಬಾದ, ನಾರಾಯಣಖೇಡ ತಾಲೂಕುಗಳು ಆಂದ್ರಪ್ರದೇಶಕ್ಕೂ ವರ್ಗಾವಣೆಗೊಂಡವು. ಬೀದರ, ಬಸವಕಲ್ಯಾಣ, ಹುಮನಾಬಾದ ಮತ್ತು ಔರಾದ ಕೇವಲ ಐದು ತಾಲೂಕುಗಳೊಂದಿಗೆ ಬೀದರ ಚಿಕ್ಕ ಜಿಲ್ಲೆಯಾಗಿ ರೂಪುಗೊಂಡಿತು.

ಪೂರ್ವಕ್ಕೆ ಆಂದ್ರಪ್ರದೇಶದ ನಿಜಾಮಾಬಾದ ಮತ್ತು ಮೇದಕ್ ಜಿಲ್ಲೆಗಳು, ಉತ್ತರ ಹಾಗೂ ಪಶ್ಚಿಮಕ್ಕೆ ಮಹಾರಾಷ್ಟ್ರದ ನಾಂದೇಡ, ಲಾತೂರ ಮತ್ತು ಉಸ್ಮಾನಾಬಾದ ಜಿಲ್ಲೆಗಳೀಂದ ಆವೃತವಾಗಿರುವ ಬೀದರ ಜಿಲ್ಲೆ ಸಹಜವಾಗಿಯೇ ಮರಾಠಿ ಮತ್ತು ತೆಲಗು ಭಾಷಗಳಿಂದ ಪ್ರಭಾವಿತವಾಗಿದೆ. ತೆಲುಗುಗಿಂತಲೂ ಮರಾಠಿ ಬೀದರ ಜನತೆಯ ಮೇಲೆ ಗಾಡ ಪರಿಣಾಮ ಬೀರಿರುವುದು ಒಂದು ವಿಶೇಷ. ಅನ್ಯ ಭಾಷಗಳ ಪ್ರಭಾವದ ಮಧ್ಯಯೂ ಬೀದರ ಜಿಲ್ಲೆಯಲ್ಲಿ ಕನ್ನಡ ಉಳದು, ಬೆಳೆದು ಬಂದಿದ್ದು ಮತ್ತು ಕನ್ನಡ ಪತ್ರಿಕೋದ್ಯಮ ನೆಲೆಯೂರಿದ್ದು ಮತ್ತೊಂದು ವಿಸ್ಮಯ.

**ಮೊದಲ ಪತ್ರಿಕೆ**: ಭಾಷಾ ವೈವಿಧ್ಯತೆಯ ವೈಶಿಷ್ಟತೆಯನ್ನು ಗಮನಿಸಿದರೆ ಬೀದರನಲ್ಲಿ ಜನ್ಮ ತಳೆದ ಮೊದಲ ಪತ್ರಿಕೆ ಕನ್ನಡದ್ದಾಗಿರಲಿಲ್ಲ ಎಂಬ ವಾಸ್ತವ ಅಚ್ಚರಿಯನ್ನು ಉಂಟು ಮಾಡಬೇಕಿಲ್ಲ. 1970ರಲ್ಲಿ ಬೀದರ ಜಿಲ್ಲೆಯ ಮೊಟ್ಟಮೊದಲ ಪತ್ರಿಕೆ ಉರ್ದು ಮತ್ತು ಪರ್ಷಿಯನ್ ಭಾಷಗಳಲ್ಲಿ ಪ್ರಕಟವಾಯಿತು. ಆದರೆ ಹೆಸರು 'ಬೀದರ ಗೆಜೆಟ್'. ಈ ಪತ್ರಿಕೆ ನಿಂತು ಹೋದ ಮೇಲೆ ಅನೇಕ ವರ್ಷಗಳವರೆಗೆ ಪತ್ರಿಕೋದ್ಯಮದಲ್ಲಿ ಶೂನ್ಯ ಆವರಿಸಿತ್ತು. ಸುಮಾರು ಮೂರು ದಶಕಗಳವರೆಗೆ ಮತ್ತೊಂದು ಪತ್ರಿಕೆ ಇಲ್ಲಿ ಉದಯಿಸಲಿಲ್ಲ.

ಬೀದರ ಜಿಲ್ಲೆಯ ಪತ್ರಿಕೋದ್ಯಮದ ಚಟುವಟಿಕೆಗಳು ಹೈದ್ರಾಬಾದ್ ಕರ್ನಾಟಕದ ಇತರ ಜಿಲ್ಲೆಗಳಿಗಿಂತ ನಿಧಾನ ಗತಿಯಲ್ಲಿ ಪ್ರಾರಂಭಗೊಂಡವು. ಕನ್ನಡ, ಉರ್ದು ಮತ್ತು ಮತ್ತು ಮರಾಠಿ ಭಾಷಗಳ ಮಧ್ಯ ಅಡಕೊತ್ತಿನಲ್ಲಿ ಸಿಕ್ಕ ಅಡಿಕೆಯಂತಾಗಿತ್ತು. ಕನ್ನಡ ಮೂಲೆಗುಂಪು ಆದದ್ದಷ್ಟೇ ಅಲ್ಲ ಅದು ತೀರಾ ಹೀನಾಯ ಸ್ಥಿತಿಯಲ್ಲಿತ್ತು. ಈ ಭಾಗದ ಜನ ಕನ್ನಡದಲ್ಲಿ ವ್ಯವಹರಿಸುವುದಕ್ಕೂ ಭಯ ಪಡುತ್ತಿದ್ದರು.

ಉರ್ದು ಮತ್ತು ಪರ್ಷಿಯನ್ ಆಡಳಿತ ಭಾಷಯಷ್ಟೇ ಆಗಿರದೆ ಶಿಕ್ಷಣ ಮಾಧ್ಯಮದ ಭಾಷೆಗಳೂ ಆಗಿದ್ದವು. ಮರಾಠಿ ತನ್ನ ಉಗ್ರ ಪ್ರಾಬಲ್ಯವನ್ನು ಮೆರೆದಿತ್ತು.

'ಬೀದರ ಗೆಜೆಟ್' ಒಂದು ಉತ್ತಮ ಸದಭಿರುಚಿಯ ಮತ್ತು ಆಧುನಿಕ ನೋಭಾವದ ಸಾಪ್ತಾಹಿಕವಾಗಿತ್ತು. ಮೆಹರ್ ಅಲಿ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆ ಬೀದರ ಆಚೆಗೂ ತನ್ನ ಪ್ರಭಾವವನ್ನು ವ್ಯಾಪಿಸಿದ್ದು ಗೋಚರಿಸುತ್ತದೆ.

ಮೈಸೂರಿನಿಂದ ಪ್ರಕಟವಾಗುತ್ತಿದ್ದ ಸಾಹಿತ್ಯಿಕ ಪತ್ರಿಕೆ 'ಸುಭೆ ಬಹಾರ್'ನ 1909ರ ಸಂಚಿಕೆಯೊಂದರಲ್ಲಿ 'ಬೀದರ ಗೆಜೆಟ್' ಪತ್ರಕೆ ಕುರಿತಾದ ಜಾಹಿರಾತು ಪ್ರಕಟವಾಗಿರುವುದು ಕುತೂಹಲಕಾರಿಯಾಗಿದೆ. ಈ ಜಾಹೀರಾತು ಇಂತ್ತಿದೆ.

ಮೊಹ್ಮದಾಬಾದ್ ಬೀದರನಿಂದ ಪ್ರಕಟವಾಗುವ ಉರ್ದು ಸಾಪ್ತಾಹಿಕ 'ಬೀದರ ಗೆಜೆಟ್' ಅನ್ನು ದಯವಿಟ್ಟು ಓದಿರಿ. ಮೆಹರ ಅಲಿ ಅವರ ಸಂಪಾದಕತ್ವದಲ್ಲಿ ಪತ್ರಿಕೆ ಈಗ ಮೂರನೇಯ ವರ್ಷಕ್ಕೆ ಕಾಲಿಟ್ಟಿದೆ. ಈ ಪತ್ರಿಕೆ ನಿಜಾಂ ಸರಕಾರದ ಸುದ್ದಿಗಳನ್ನು ಒಳಗೋಂಡಿರುವುದಲ್ಲದೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಷಯಗಳನ್ನು ಪ್ರಕಟಿಸುತ್ತದೆ. ಶಿಕ್ಷಣ, ಸಂಸ್ಕೃತಿ ಮೌಲ್ಯಗಳು, ಧಾರ್ಮಿಕ ಸುಧಾರಣೆ ಮತ್ತು ಇತಿಹಾಸದಂತಹ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ. ಆಮೀನುದಾರರಿಗೆ,

ಶ್ರೀಮಂತರಿಗೆ ಮತ್ತು ವಕೀಲರಿಗೆ ವಾರ್ಷಿಕ ಚಂದಾ ರೂ. 375. ಈ ಜಾಹೀರಾತಿನ ಮೇಲೆಯಷ್ಟೆ ಹೇಳುವುದಾದರೆ ಬೀದರ 'ಗೆಜೆಟ್' ನೂರು ವರುಷಗಳಷ್ಟು ಹಿಂದೆಯೇ ಒಂದು ಪರಿಪೂರ್ಣ ಪತ್ರಿಕೆಯಾಗಿತ್ತು. ಅಷ್ಟೆ ಅಲ್ಲ ಪ್ರಯೋಗ ಶೀಲ ಪತ್ರಿಕೆಯಾಗಿರಲಿಕ್ಕೂ ಸಾಧ್ಯ. ಪತ್ರಿಕೆಯ ಚಂದಾ ಹಣವನ್ನು ಸಮಾಜದ ವಿವಿಧ ವರ್ಗಗಳ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ನಿಗದಿಪಡಿಸಿದ್ದು ಒಂದು ವಿಶೇಷವಾಗಿದೆ. ಇದೊಂದು ರೀತಿಯ ಓದುಗರಿಗಾಗಿರುವ ಸಾಮಾಜಿಕ ಆರ್ಥಿಕ ನ್ಯಾಯದ ಮಾದರಿ!

ಬೀದರ 12 ಪುಟಗಳ ಪತ್ರಿಕೆಯಾಗಿತ್ತು. ಪ್ರತಿ ಪುಟವೂ ಮೂರು ಕಾಲಂಗಳಿಂದ ಕೂಡಿತ್ತು. ಪತ್ರಿ ಕಾಲಮ್ಮಿಗೆ 40 ಸಾಲುಗಳಿದ್ದು ಪ್ರತಿಯೊಂದು ಪುಟವೂ ಪ್ರತ್ಯೇಕ ವಿಷಯವನ್ನು ಒಳಗೊಂಡಿರತಿತ್ತು. ಪ್ರತಿಯೊಂದು ಪುಟದ ಮೇಲೆ ಪ್ರಾದೇಶಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ, ಸಂಸ್ಕೃತಿ, ಧರ್ಮ, ಆರೋಗ್ಯ ಇತ್ಯಾದಿ ಸೂಚಕಗಳಿರುತ್ತಿದ್ದವು. ಇಂದಿನ ಆಧುನಿಕ ಪತ್ರಿಕಾ ಯುಗದಲ್ಲೂ ಪುಟಗಳ ಮೇಲೆ ಈ ತರಹದ ಸೂಚಕಗಳಿರುವುದನ್ನು. ಗಮನಿಸಿದರೆ 'ಬೀದರ ಗೆಜೆಟ್' ಶತಮಾನದಷ್ಟು ಹಿಂದೆಯೇ ಆಧುನಿಕ ಪತ್ರಿಕಾ ಶಿಸ್ತನ್ನು ಮೈಗೂಡಿಸಿಕೊಂಡಿದ್ದು ಆಶ್ಚರ್ಯವೆನಿಸದೇ ಇರುವುದಿಲ್ಲ.

ಈ ಪತ್ರಿಕೆಯ ಮತ್ತೊಂದು ವಿಶೇಷತೆ ಎಂದರೆ ಸದು ಇತರ ಉರ್ದು ಪತ್ರಿಕೆಗಳೊಂದಿಗೆ ವಿಷಯ, ಮಾಹಿತಿ, ಲೇಖನ ಮುಂತಾದವುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದುದು. ಅಂದಿನ ಕಾಲದ ಇತರ ಉರ್ದು ಪತ್ರಿಕೆಗಳಾದ ಖಾದಿಯಾನ್, ನಿಯಾರ್, ರೆಹನುಮಾ–ಎ–ತಾಲಿಮ್, ಮೊರದಾಬಾದ್, ಲಾಹೋರ ಇತ್ಯಾದಿಗಳ ಲೇಖನಗಳನ್ನು 'ಬೀದರ ಗೆಜೆಟ್' ಪ್ರಕಟಿಸುತಿತ್ತು. ಈ ತರಹದ ಸುದ್ಧಿ/ ಲೇಖನ ವಿನಿಮಯಕ್ಕೆ ಯಾವುದೇ ಶುಲ್ಕವನ್ನು ನೀಡಬೇಕಾಗಿರಲಿಲ್ಲ. ಅದು ಬರೀ ಪರಸ್ಪರ ವಿನಿಮಯದ ನೆಲೆಯಲ್ಲಿ ನಡೆಯುತ್ತಿತ್ತು. 'ಬೀದರ ಗೆಜೆಟ್'ನಲ್ಲಿ ಇತರ ಪತ್ರಿಕೆಗಳ ಲೇಖನಗಳು ಪ್ರಕಟವಾಗದಂತೆ ಇತರ ಪತ್ರಿಕೆಗಳಲ್ಲಿ 'ಬೀದರ ಗೆಜೆಟ್'ನ ಲೇಖನಗಳು ಪ್ರಕಟಗೊಳ್ಳುತ್ತಿದ್ದವು. ಈ ತರಹದ ವಿನಿಮಯವನ್ನು ನಾವು ಇಂದಿಗೂ ದೊಡ್ಡ ಹಾಗೂ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಕಾಣಬಹುದು. ಉದಾಹರಣೆಗೆ ದಕ್ಷಿಣ ಭಾರತದ ಜನಪ್ರಿಯ ಇಂಗ್ಲೀಷ 'ದಿ ಹಿಂದು'ವಿನಲ್ಲಿ 'ದಿ ಗಾರ್ಡಿಯನ್', ನ್ಯೂಯಾರ್ಕ ಟೈಮ್ಸ್' ನಂತಹ ಖ್ಯಾತ ವಿದೇಶಿ ಪತ್ರಿಕೆಗಳ ಲೇಖನಗಳನ್ನು ಕಾಣಬಹುದು.

'ಬೀದರ ಗೆಜೆಟ್'ಗೆ ಬರೀ ಪತ್ರಿಕಾ ಸಂಪಾದಕೀಯ ಸಿಬ್ಬಂದಿಲ್ಲದೆ ಇತರ ಪರಿಣಿತರೂ ಲೇಖನಗಳನ್ನು ಬರೆಯುತ್ತಿದ್ದರು.

'ಬೀದರ ಗೆಜೆಟ್'ನ ಅತ್ಯಂತ ಹಳೆಯ 16–01–1909ರ ಒಂದು ಸಂಚಿಕೆ ಲಭ್ಯವಿದ್ದು ಅದನ್ನು ಬೀದರನ ಮೊಹ್ಮದ್ ಗವಾನ್ ಉರ್ದು–ಅರೇಬಿಕ್ ಗ್ರಂಥಾಲಯದಲ್ಲಿ ಕಾಯ್ದಿರಿಸಲಾಗಿದೆ. ಬೀದರ ಜಿಲ್ಲೆಯಲ್ಲಿ ನೂರು ವರುಷಕ್ಕೂ ಮುಂಚೆಯೇ ಪತ್ರಿಕೋದ್ಯಮಕ್ಕೆ ಶ್ರೀಕಾರ ಹಾಕಿ ಅತ್ಯುತ್ತಮ ಪತ್ರಿಕೆ ಎನಿಸಿಕೊಂಡ 'ಬೀದರ ಗೆಜೆಟ್' ದುರದೃಷ್ಟವಶಾತ್ ಸುಮಾರು ಒಂದು ದಶಕದ ನಂತರ ನಿಂತು ಹೋಯಿತು.

'ಬೀದರ ಗೆಜೆಟ್' ಸ್ಥಗಿತಗೊಂಡ ಮೇಲೆ ಜಿಲ್ಲೆಯ ಪತ್ರಿಕೋದ್ಯಮದಲ್ಲಿ ಬಹಳಷ್ಟು ಕಾಲ ನಿರ್ವಾತ ಉಂಟಾಗಿತ್ತು. ಎರಡನೇಯ ಪತ್ರಿಕೆ ಬೇಗ ಬರಲಿಲ್ಲ. 1940ರ ದಶಕದಲ್ಲಿ ಅಂದಿನ ನಿಜಾಂ ಪ್ರಭುತ್ವ ವಿರೋಧಿ ಶಕ್ತಿಗಳು ಮತ್ತು ಕ್ರಾಂತಿಕಾರಿಗಳು ಕೆಲವು ಗೋಡೆ ಪತ್ರಿಕೆಗಳನ್ನು ಪ್ರಾರಂಭಿಸಿದರು. ಕೆಲವು ಉಲ್ಲೇಖನಿಯ ಗೊಡೆ ಪತ್ರಿಕೆಗಳೆಂದರೆ: ಬಾಲಾಘಾಟ್, ಮೊಹ್ಮದ್ ಗವಾನ್, ರಫಿ, ಜಿನ್ನಾ ಇತ್ಯಾದಿ. ಕಾಲಕಾಲಕ್ಕೆ ಬರುತ್ತಿದ್ದ ಭಿತ್ತಿ ಪತ್ರದಂತಹ ಪತ್ರಿಕೆಗಳನ್ನು ಜನರು ಓದಲು ಅನುಕೂಲವಾಗಲೆಂದು ಗೋಡೆಗಳಿಗೆ ಅಂಟಿಸಲಾಗುತ್ತಿತ್ತು.

1950ರಲ್ಲಿ ಆರಂಭವಾದ 'ಇನ್ಸಾನಿಯತ್' ಬೀದರ ಜಿಲ್ಲೆಯ ಎರಡನೇಯ ಉರ್ದು ಪತ್ರಿಕೆ ಮತ್ತು ಸ್ವಾತಂತ್ರ್ಯೋತ್ತರದ ಮೊದಲ ಉರ್ದು ಪತ್ರಿಕೆ. ಮೊಯಿನುದ್ದೀನ್ ಮೊಯಿನಾಬಾದಿ ಅದರ ಸಂಪಾದಕರು

[1960ರಲ್ಲಿ ಅಬ್ದುಲ್ ಹಮೀದ ಅವರು 'ಹೈದ್ರಾಬಾದ ಕರ್ನಾಟಕ' ಮತ್ತು ಅಬ್ದುಲ್ ವಹೀದ ಅವರು 1964ರಲ್ಲಿ 'ವಕ್ತಕಾ ಪೈಗಾಂ' ಎಂಬ ಪತ್ರಿಕೆಗಳನ್ನು ಪ್ರಾರಂಭಿಸುವ ಮೂಲಕ ಉರ್ದು ಪತ್ರಿಕೋದ್ಯಮದ ಪರಂಪರೆಯನ್ನು

ಮುಂದುವರೆಸಿಕೊಂಡು ಹೊದರು ಅದು ಮೊದಲು ವಾರಪತ್ರಿಕೆಯಾಗಿದ್ದು ನಂತರ ದಿನ ಪತ್ರಿಕೆಯಾಗಿ ಕೆಲಕಾಲ ನಡೆದು ನಿಂತು ಹೊಯಿತು.

ಕವಿಗಳೂ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದ ಮೊಹಿಸಿನ್ ಕಮಾಲ ಅವರು 1968ರಲ್ಲಿ 'ಗವಾನ್' ಎಂಬ ಉರ್ದು ದೈನಿಕವನ್ನು ಪ್ರಾರಂಭಿಸಿದರು. 1980ರಲ್ಲಿ ಅವರು ನಿಧನರಾಗುವವರೆಗೂ ಅದು ಪ್ರಕಟಗೊಳ್ಳುತ್ತಿದ್ದು ನಂತರ ನಿಂತು ಹೋಯಿತು

ಅಲ್ಪಾಯುಷ್ಯ ಹೊಂದಿದ್ದ ಇತರ ಉರ್ದುಪತ್ರಿಕೆಗಳೆಂದರೆ: ಸಭಾಗತ ಉಲ್ಲಾ ಅವರ 'ಬಹಮನಿ ಸಮಾಚಾರ' ಫದೀದುಲಾ ಅಲ್ವಿ ಅವ 'ಆಫ್‌ತಾಬ–ಎ–ಬೀದರ' ಮತ್ತು ಶಂಸುಲ್ ಇಸ್ಲಾಂ ಅವರ 'ಬಸತ್–ಎ–ಹಯಾತ್'.

ಎಂ.ಎ. ಹಮೀದ ಅವರು 1960ರಲ್ಲಿ 'ಗುಲ್ಬರ್ಗದಿಂದ 'ಹೈದ್ರಾಬದ ಕರ್ನಾಟಕ' ಎಂಬ ಇಂಗ್ಲೀಷ ಸಾಪ್ತಾಹಿಕವನ್ನು ಪ್ರಾರಂಭಿಸಿ ಅದನ್ನು ನಂತರ ಉರ್ದು ದಿನಪತ್ರಿಕೆಯನ್ನಾಗಿ ಮಾರ್ಪಡಿಸಿದರು. 1979ರಲ್ಲಿ ಅದು ಬೀದರಗೆ' ಸ್ಥಳಾಂತರಗೊಂಡಿತು. ಪತ್ರಿಕೆ ಇಂದಿಗೂ ಪ್ರಕಟವಾಗುತ್ತಿದೆ.

ಎಸ್.ಐ.ಖಾದ್ರಿ ಅವರು 1984ರಲ್ಲಿ 'ಅದಬ್ಬೀ ಅಕ್ಕಸ್' ಎಂಬ ಪತದತಿಕೆಯನ್ನು ಪ್ರಾರಂಭಿಸಿದರು. ಈಗ ಅದು ಅವರ ಪುತ್ರ ಎಸ್.ಎಸ್.ಖಾದ್ರಿ ಅವರ ಸಂಪಾದಕತ್ವದಲ್ಲಿ ಇಂದೂ ಮುಂದುವರೆದುಕೊಂಡು ಬಂದಿದೆ.

'ಬೀದರ ಕಿ ಆವಾಜ' ಹಿಂದಿ ದಿನ ಪತ್ರಿಕೆಯ ಸಂಪಾದಕರೂ, ವಿಧಾನ ಪರಿಷತ್ತಿನ ಸದಸ್ಯರೂ ಆಗಿರುವ ಕಾಜಿ ಅರ್ಷದ ಅಲಿ ಅವರು 'ಸುರ್ಖ್ ಜಮೀನ' ಎಂಬ ಉರ್ದು ದಿನ ಪತ್ರಿಕೆಯನ್ನು 1993ರಲ್ಲಿ ಪ್ರಾರಂಭಿಸಿದ್ದಾರೆ. ಓದುಗರ ಉತ್ತಮ ಬೆಂಬಲವನ್ನು ಹೊಂದಿರುವ ಈ ಪತ್ರಿಕೆ ನಿರಂತರವಾಗಿ ನಡೆದುಕೊಂಡು ಬರುತ್ತಿದ್ದು ಬೀದರ ಜಿಲ್ಲೆಯ ಹೊರಗೂ ಜನಪ್ರಿಯತೆಯನ್ನು ಗಳಿಸಿದೆ.

ಬೀದರ ಜಿಲ್ಲೆಯ ಉರ್ದು ಪತ್ರಿಕೋದ್ಯಮ ಬರೀ ಮುಸಲ್ಮಾನರಿಗಷ್ಟೇ ಸೀಮಿತವಾದೆಯೆಂದು ಭಾವಿಸಿದರೆ ಪ್ರಮಾದವದೀತು ಮುಸ್ಲಿಮೇತರರೂ ಉರ್ದು ಪತ್ರಿಕೆಗಳನ್ನು ಇಲ್ಲಿ ಪ್ರಾರಂಭಿಸಿದ್ದಾರೆ ದೇಶಕ್ಕೆ ಸ್ವಾತಂತ್ರ್ಯ ಬಂದ ಕೆಲವೇ ದಿನಗಳ ನಂತರ ಆರ್.ಗಣಪತರಾವ ಅವರು 'ರಫೀಕ್' ಎಂಬ ಉರ್ದು ಪತ್ರಿಕೆಯನ್ನು ಪ್ರಾರಮಭಿಸಿದ್ದರು.

ಇಂತಹ ದುರ್ಭರ ಪರಸ್ಥಿತಿಯಲ್ಲಿ ಕನ್ನಡ ಕೈಯಲ್ಲಿ ಜೀವ ಹಿಡಿದುಕೊಂಡು ಬದುಕಿತ್ತು. ಅದ್ಯಾಗೊ ಭಾಲ್ಕಿಯಲ್ಲಿ ಕನ್ನಡದ ಚಟುವಟಿಕೆಗಳು ಸದ್ದಿಲದೆ ನಡೆಯುತ್ತಿದ್ದುದು ಒಂದು ವಿಶೇಷ

ಅಲ್ಲಿಯ ಪಟ್ಟದ ದೇವರ ಮಠ ಕನ್ನಡ ಭಾಷಯ ಆಗರವಾಗಿತ್ತು. ಅಲ್ಲಿ ನಡೆಯುತ್ತಿದ್ದ ಮಠದ ಶಾಲೆ ಕನ್ನಡದ ಎಲ್ಲ ಚಟುವಟಿಕೆಗಳಿಗೆ ಪ್ರೇರನದಾಯಕವಾಗಿತ್ತು. ಕನ್ನಡ ಚಳುವಳಿಗೆ ತನ್ನದೇಯಾದ ಮಹತ್ವದ ಕಾಣಿಕೆ ನೀಡಿರುವ ಪಟ್ಟದೇವರ ಮಠ ಕನ್ನಡದ ಮರುಹುಟ್ಟಿಗೂ ಕಾರಣವಾಗಿ ಕನ್ನಡದ ಪತಾಕೆಯನ್ನು ಹೆಮ್ಮೆಯಿಂದ ಹಾರಿಸಿತ್ತು.

ಉರ್ದು ಪತ್ರಿಕೋದ್ಯಮದ ಪರಂಪರೆ ಅಷ್ಟೊಂದು ಭವ್ಯವಾಗಿರದಿದ್ದರೂ ಯಾವ ಮಟ್ಟದಲ್ಲಿ ಈ ಜಿಲ್ಲೆಯಲ್ಲಿ ಉರ್ದು ಪತ್ರಿಕೋದ್ಯಮ ಬೆಳೆಯಬೇಕಿತ್ತೋ ಆ ಮಟ್ಟಕ್ಕೆ ಬೆಳೆಯಲಾಗಲಿಲ್ಲ. ಉರ್ದು ಭಾಷೆಗೆ ನಿಜಾಮರ ಕಾಲದಲ್ಲಿ ರಾಜಾಶ್ರಯ ಇದ್ದುದರಿಂದ, ಅದು ಆಡಳಿತ ಮತ್ತು ಶಿಕ್ಷಣ ಮಾದ್ಯಮದ ಭಾಷ ಅಗಿದ್ದುದರಿಂದ ಅದಕ್ಕೆ ಉತ್ತೇಜನ ದೊರೆತದ್ದು ಸಹಜ. ಈ ಉತ್ತೇಜನಕಾರಿ ವಾತಾವರಣವನ್ನು ಬಳಸಿಕೊಂಡು ಕೆಲವರಾದರೂ ಉರ್ದು ಪತ್ರಿಕೆಗಳನ್ನು ಪ್ರಾರಂಭಿಸುವ ಸಾಹಸಕ್ಕೆ ಕೈ ಹಾಕಿದ್ದು ಗಮನಾರ್ಹ.

ಹಿಂದಿ ಭಾಷಾ ಪತ್ರಿಕೋದ್ಯವೂ ಕೂಡ ಇಲ್ಲಿ ಉತ್ತಮವಾಗಿ ಬೆಳೆದು ಬಂದಿದೆ, ಹಿಂದಿ ಇಲ್ಲಿಯ ಅತ್ಯಂತ ಬಲಿಷ್ಠ ಜನ ಸಂಪರ್ಕ ಭಾಷೆಯಾಗಿದೆ. ವಿಶ್ವನಾಥ ಪಾಟೀಲರು 1969ರಲ್ಲಿ 'ದಮನ್' ಎಂಬ ಪತ್ರಿಕೆಯನ್ನ ಪ್ರಾರಂಭಿಸಿ ಹಿಂದಿ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿದರು. 'ದಮನ್' ಒಂದು ಉತ್ತಮ ಸದಭಿರುಚಿಯ ಪತ್ರಿಕೆಯಾಗಿದ್ದು ಅದು ಮುಖ್ಯವಾಹಿನಿಯ ಪತ್ರಿಕೆಗೆ ಒಂದು ಉತ್ತಮ ನಿದರ್ಶನ. 'ದಮನ್' ಪತ್ರಿಕೆಯ ಜನಪ್ರಿಯತೆ ಎಷ್ಟಿದೆಯಂದರೆ ಅದರ ಸಂಸ್ಥಾಪಕ, ಪಾಂದಕ ವಿಶ್ವನಾಥ ಪಾಟೀಲರು 'ದಮನ್' ಪಾಟೀಲರೆಂದೇ ಖ್ಯಾತರಾಗಿರೆ.

ಖಾಜಿ ಅರ್ಷದ ಅಲಿ ಅವರು 1977ರಲ್ಲಿ 'ಬೀದರ ಕಿ ಆವಾಜ್' ಎಂಬ ಇನ್ನೊಂದು ಹಿಂದಿ ಪತ್ರಿಕೆಯನ್ನು ಆರಂಭಿಸಿ ಅದನ್ನು ಜನಪ್ರಿಯಗೊಳಿಸಿದರು. ಪತ್ರಿಕೋದ್ಯಮದ ಜೊತೆಗೆ ರಾಜಕಾರಣಿಯೂ ಆಗಿರುವ ಅರ್ಷದ ಅಲಿ ಕರ್ನಾಟ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಕಮಲಾಕರ ಜೋಶಿ ಅವರ 'ಬೀದರ ಸಂದೇಶ' ಮತ್ತೊಂದು ಹಿಂದಿ ಪತ್ರಿಕೆ. ದುನಿಯಾ', 'ದಖನ್ ದೇಶ', 'ಬಹಮನಿ ಸಮಾಚಾರ' ಇವೆಲ್ಲ ಉರ್ದು ಪತ್ರಿಕೆಗಳು. ಮೋಹಸೀನ್ ಕಮಾಲ ಅವರ ಒಂದು ಉರ್ದು ಪತ್ರಿಕೆ 'ಗವಾನ್' ಮತ್ತು 'ಬೀದರ ಸ್ಪೀಕರ್' ಎಂಬ ಇಂಗ್ಲೀಷ ಪತ್ರಿಕೆಗಳನ್ನು ಪ್ರಾರಂಭಿಸಿ ನಡೆಸಿಕೊಂಡು ಹೋಗಿದ್ದಾರೆ. ವಿಜಯಕುಮಾರ ಪಾಟೀಲ ಅವರು 'ಇಂಡಿಪೆಂಡೆಂಟ್ ಸ್ಪಿರಿಟ್' ಎಂಬ ಇಂಗ್ಲೀಷ ಪತ್ರಿಕೆಯನ್ನು ಆರಂಭಿಸಿದರು.

**ಮೊದಲ ಕನ್ನಡ ಪತ್ರಿಕೆ:** ಸ್ವಾತಂತ್ರ್ಯಾನಂತರ ಅರವತ್ತರ ದಶಕದಲ್ಲಿ ಈ ಜಿಲ್ಲೆಯ ವಾಚನಾಲಯಗಳಲ್ಲಿ ಕನ್ನಡ ಪುಸ್ತಕ, ಪತ್ರಿಕೆ ತರಿಸುವುದು,ಕನ್ನಡಕರ್ಯಕ್ರಮ ರೂಪಿಸುವ ಚಟುವಟಿಕೆಗಳು ಆರಂಭಗೊಂಡವು. ತಾಳೀಕೋಟೆ ಭೀಮಸೇನ ರಾವ್, ಆರ್. ಆರ್. ದಿಗ್ಗಾವಿ, ಪ್ರಭುರಾವ್ ಕಂಬಳಿವಾಲೆ ಅವರುಗಳು ಈ ದಿನಗಳಲ್ಲಿ ಕೈ ಬರಹದ ಕನ್ನಡ ಪತ್ರಿಕೆಯನ್ನು ಹೊರತಂದರು.

ಬೀದರ ಜಿಲ್ಲೆಯ ಕನ್ನಡ ಪತ್ರಿಕೋದ್ಯಮಕ್ಕೆ ಅಂತಹ ಇತಿಹಾಸ ಇಲ್ಲವೆಂದು ಹೇಳಿದರೆ ಪ್ರಮಾದವಾಗಲಿಕ್ಕಿಲ್ಲ ಕರ್ನಾಟಕ ಏಕೀಕರಣದ ಒಂದು ದಶಕದ ನಂತರ ಅಲ್ಲಲ್ಲಿ ಕೆಲವರು ಕನ್ನಡ ಪತ್ರಿಕೆ ಹೊರತರುವ ಸಾಹಸಕ್ಕೆ ಕೈ ಹಾಕಿದರು. ಕನ್ನಡ ಪತ್ರಿಕೆಗಳ ಹಿನ್ನೆಲೆ ತೀರಾ ಚಿಕ್ಕದು. ಅದರ ಹುಟ್ಟು ಬೆಳವಣಗೆ ಎಲ್ಲವೂ ಆಧುನಿಕ ಕಾಲದ್ದು

ಬೀದರ ಜಿಲ್ಲೆಯ ಪ್ರಪ್ರಥಮ ಮುದ್ರಿತ ಕನ್ನಡ ಪತ್ರಿಕೆ ಎಂದರೆ 1968ರಲ್ಲಿ ಕೃಷ್ಣಮೂರ್ತಿ ಕರ್ಪೂರ ಅವರು ಪ್ರಾರಂಭಿಸಿದ 'ಡೇಲಿನ್ಯೂಸ್', ಜಿಲ್ಲೆಯ ಮೊದಲ ಕನ್ನಡ ದಿನಪತ್ರಿಕೆ ಇಂಗ್ಲಿಷ ಹೆಸರಿನಲ್ಲಿ ಬಂದದ್ದು ಒಂದು ವಿಶೇಷವೇ. ಪತ್ರಿಕೆಯ ಶೀರ್ಷಿಕೆಯನ್ನು ಕೇಳಿದ ಯಾರಾದರೂ ಅದನ್ನು ಆಂಗ್ಲ ದಿನ ಪತ್ರಿಕೆ ಎಂದು ಭಾವಿಸುವುದು ಸಹಜ.

ಕರ್ನಾಟಕದಲ್ಲಿ ಕನ್ನಡ ಪತ್ರಿಕೋದ್ಯಮ ಆರಂಭವಾದ 156 ವರ್ಷಗಳ ಅಸಾಮಾನ್ಯ ಸುದೀರ್ಘ ಕಾಲದ ನಂತರ ಕರ್ನಾಟಕದ್ದೇ ಭಾಗವಾದ ಬೀದರನಲ್ಲಿ ಕನ್ನಡ ಪತ್ರಿಕೋದ್ಯಮ ತಲೆ ಎತ್ತಲು ಸಾದ್ಯವಾಗಿರವುದನ್ನು ಗಮನಿಸಿದರೆ ಬೀದರ ಜಿಲ್ಲೆಯ ಕನ್ನಡ ಸಂಬಂಧಿ ದಯನೀಯ ಸ್ಥಿತಿಯನ್ನು ಯಾರಾದರು ಅರ್ಥ ಮಾಡಿಕೊಳ್ಳಬಹುದು.

ಕೃಷ್ಣಮೂರ್ತಿ ಕರ್ಪೂರ ಅವರು 1968ರಲ್ಲಿ (ಡೇಲಿನ್ಯೂಸ್) ದೈನಿಕ ಆರಂಭಿಸಿ ಕನ್ನಡ ಪತ್ರಿಕೋದ್ಯಮಕ್ಕೆ ಆಸ್ತಿವಾರ ಹಾಕಿದ ಮೇಲೆ ಪುನಃ ಅವರೇ 1969ರಲ್ಲಿ 'ಮೈತ್ರಿ' ಎಂಬ ವಸಂತ ಸಂಚಿಕೆಯನ್ನು ಪ್ರಕಟಿಸಿದರು. 1974ರ ಸುಮಾರಿನಲ್ಲಿ ಮತ್ತೆ ಅವರೇ 'ಬೀದರ ಟೈಮ್ಸ' ಎಂಬ ಪತ್ರಿಕೆಯನ್ನು ಪ್ರಕಟಿಸಲಾರಂಭಿಸಿದರು. ಕರ್ಪೂರ ಅವರ ಪತ್ರಿಕಾ ವ್ಯಾಮೋಹ ಶ್ಲಾಘನೀಯವಾದದ್ದು. ಕನ್ನಡ ಪತ್ರಿಕೆಗಳಿಗೆ ಇಂಗಲೀಷ್ ಹೆಸರಿಡುವ ಅವರ ವೈಖರಿ ಮೋಜಿನದಾಗಿದ್ದರೂ ಪತ್ರಿಕೆ ಮಾತ್ರ ಸಂಪೂರ್ಣ ಕನ್ನಡ ಮಯವಾಗಿದ್ದುದು ಹರ್ಷವನ್ನುಂಟುಮಾಡುವ ಸಂಗತಿ. ಅವರು ಬಿತ್ತಿದ ಕನ್ನಡ ಪತ್ರಿಕೋದ್ಯಮದ ಬೀಜ ಬೀದರ ಜಿಲ್ಲೆಯಲ್ಲಿ ಈಗ ಹೆಮ್ಮರವಾಗಿ ಬೆಳೆದಿದೆ.

ಭಾಲ್ಕಿಯ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ವತಿಯಿಂದ ಕೆ. ಭೀಮರಾವ್ ಅವರ ಸಂಸ್ಥಾಪಕತ್ವದಲ್ಲಿ 1971ರಲ್ಲಿ 'ಶಾಂತಿ ಕಿರಣ' ಎಂಬ ವಾರ ಪತ್ರಿಕೆ ಪ್ರಾರಂಭವಾಯಿತು. ಕೆಲವು ತಿಂಗಳುಗಳ ನಂತರ ಭೀಮರಾವ್ ತಮ್ಮ ಕಾರ್ಯಕ್ಷೇತ್ರವನ್ನು ಗುಲ್ಬರ್ಗಾಕ್ಕೆ ಬದಲಿಸಿದ್ದರಿಂದ ಜಿ. ಬಿ. ವಿಸಾಜಿ ಅವರು ಪತ್ರಿಕೆಯನ್ನು ಮುಂದುವರಿಸಿಕೊಂಡು ಹೋಗುವ ಜವಬ್ದಾರಿ ಹೊತ್ತುಕೊಂಡರು. ಕೆಲ ಸಮಯದ ನಂತರ ಈ ವಾರಪತ್ರಿಕೆಯನ್ನು ಭಾಲ್ಕಿಯ ಹಿರೇಮಠ ಸಂಸ್ಥಾನಕ್ಕೆ ವರ್ಗಾಯಿಸಿದ ಮೇಲೆ ಅದು ಹೊಸ ಪತ್ರಿಕೆಯಾಗಿ ಪ್ರಕಟವಾಗತೊಡಗಿತು. ಅದು ವಿಸಾಜಿ ಅವರ ಸಂಪಾದಕತ್ವದಲ್ಲೆ ದ್ವಿಮಾಸ ಪತ್ರಿಕೆಯಾಗಿ ಹೊರಡಲಾರಂಭಿಸಿತು.

ಭೀಮರಾವ್ ಅವರು ದೆಹಲಿಯಲ್ಲಿ ಪತ್ರಿಕೋದ್ಯಮವನ್ನು ಶೈಕ್ಷಣಿಕವಾಗಿ ಅಭ್ಯಾಸ ಮಾಡಿದವರಾಗಿದ್ದರು. ಅವರು ಭಾಲ್ಕಿಯಲ್ಲಿ ಪ್ರಾರಂಭಿಸಿದ 'ಶಾಂತಿ ಕಿರಣ' ಅವರ ಸಂಪಾದಕತ್ವದಲ್ಲಿ ಅಲ್ಪಾವಧಿಗೆ ನಡೆದರು ಅನೇಕ ಬರಹಗಾರರಿಗೆ ಆ ಪತ್ರಿಕೆ ಉತ್ತಮ ಅಭಿವ್ಯಕ್ತಿ ಮಾದ್ಯಮವಾಗಿತ್ತು, ಮತ್ತು ಒಂದು ಅವಕಾಶವಾದ ವೇದಿಕೆಯಾಗಿತ್ತು.

ಉರ್ದು ಕವಿಗಳಾಗಿದ್ದ ಜಹೀರ ಅಜ್ಮತ್ ಅವರು ಕನ್ನಡ ಪತ್ರಿಕೆಗಳ ಪ್ರಕಾಶನಕ್ಕೆ ಸಾಹಸ ಮಾಡಿದ್ದು ಒಂದು ವಿಶಿಷ್ಟ ಮತ್ತು ಕುತೂಹಲಕರ ಬೆಳವಣಿಗೆಯಾಗಿದೆ. 1975ರಲ್ಲಿ ಅಜ್ಮತ್ ಅವರು 'ಕನ್ನಡ ರತ್ನ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಇದು ಗುಣವಂತರಾವ್ ಪಾಟೀಲರ ಸಂಗಮ ಮುದ್ರಣಾಲಯದಲ್ಲಿ ಮುದ್ರಣವಾಗುತ್ತಿತ್ತು. ಆದರೆ ಈ ಪತ್ರಿಕೆ ಬಹುಕಾಲ ಮುಂದುವರೆಯಲಿಲ್ಲ.

ಅಜ್ಮತ್ ಅವರೇ ಮತ್ತೊಂದು ಕನ್ನಡ 'ಗವಾನ್' ಅನ್ನು

1975ರಲ್ಲಿ ಆರಂಭಿಸಿದರು. ಈ ಪತ್ರಿಕೆಗೆ ಮೊಹಸಿನ ಕಮಾಲ ಅವರು ನೆರವು ನೀಡಿದ್ದರು. ಅಜ್ಮತ್ ಅವರು ಮಾತೃಭಾಷೆ ಉರ್ದು ಆಗಿದ್ದರೂ ಕನ್ನಡ ಪತ್ರಿಕೋದ್ಯಮದಲ್ಲಿ ತೊಡಗಿದ ಅವರ ಸಾಹಸ ಶ್ಲಾಘನೀಯವಾಗಿದೆ. ಕನ್ನಡತು'ರು ಅದರಲ್ಲೂ ಮುಸಲ್ಮಾನರು ಕನ್ನಡದ ಬೆಳವಣಿಗೆಗೆ ನೀಡಿದ ಕಾಣಿಕೆಯ ಬಹಳ ಅಪರೂಪದ ನಿದರ್ಶನ ಇದಾಗಿದೆ.

ಸಾಹಿತ್ಯ ಮತ್ತು ಸಾಹಿತ್ಯ ಚಟುವಟಿಕೆಗಳಿಗೆ ಮೀಸಲಾಗಿದ್ದ 'ಅನುಭವ' ಎಂಬ ಪತ್ರಿಕೆಯನ್ನು ಜಿ. ಬಿ. ವಿಸಾಜಿ ಅವರು ಭಾಲ್ಕಿಯಿಂದ ಆರಂಭಿಸಿದರು. ಈ ಹಿಂದೆ ಅವರು 'ಶಾಂತಿ ಕಿರಣ' ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಅನುಭವದ ಹಿನ್ನಲೆ ಅವರು ಹೊಸಪತ್ರಿಕೆ ಪ್ರಾರಂಭಿಸಲು ನೆರವಾಯಿತು.

**ಖ್ಯಾತಿ:** ಇದು 1970ರ ದಶಕದ ಮಧ್ಯಾವಧಿಯವರೆಗೆ ಪ್ರಕಟಗೊಂಡ ಕನ್ನಡ ಪತ್ರಿಕೆಗಳಿಗೆ ಸ್ವಲ್ಪ ಭಿನ್ನವಾಗಿ ನಿಲ್ಲುವಂತಃದೆಂದರೆ ಎಂ. ಜಿ. ದೇಶಪಾಂಡೆ ಅವರ ಸಂಪಾದಕತ್ವದಲ್ಲಿ 1977ರಲ್ಲಿ ಪ್ರಾರಂಭಿಸಲಾದ. ಈ 'ಖ್ಯಾತಿ' ಪತ್ರಿಕೆ. ದೇಶಪಾಂಡೆ ಅವರು ಮೂಲತಃ ಪ್ರಯೋಗ ಶೀಲಮನೋಭಾವದವರು. ಅವರು ಇದೇ ಮೊದಲ ಬಾರಿಗೆ ಪತ್ರಿಕೆಯಲ್ಲಿ ಕಾದಂಬರಿಯನ್ನು ಧಾರವಾಹಿಯಾಗಿ ಪ್ರಕಟಿಸಲು ಶುರುಮಾಡಿದರು. ಆಯಾ ಧಾರವಾಹಿಗೆ ಸೂಕ್ತವೆನಿಸುವ ಚಿತ್ರವೂ ಪ್ರಕಟವಾಗುತ್ತಿತ್ತು. ತಮ್ಮ ಪತ್ರಿಕೆಯನ್ನು ಕಲ್ಲಚ್ಚಿನಲ್ಲಿ ಪ್ರಕಟಿಸುತ್ತಿದ್ದ ದೇಶಪಾಂಡೆ ಅವರು ಕಲಾವಿದ ಚಂ. ಭೀ. ಸೋಮಶೇಟ್ಟಿ ಅವರ ಸೇವೆಯನ್ನು ತಮ್ಮ ಪತ್ರಿಕೆಗಾಗಿ ಬಳಸಿಕೊಂಡದ್ದು ವಿಶೇಷ. ಪತ್ರಿಕೆ ಕಲ್ಲಚ್ಚಿನಲ್ಲಿ ಪ್ರಕಟವಾದರು ಪತ್ರಿಕೋದ್ಯಮದ ಪ್ರಗತಿಯ ಒಲವುಗಳನ್ನು 'ಖ್ಯಾತಿ'ಯಲ್ಲಿ ಗುರುತಿಸಲು ಸಾಧ್ಯವಿದೆ.

1980ರ ದಶಕ ಬೀದರ ಜಿಲ್ಲೆಯ ಪತ್ರಿಕೋದ್ಯೆಮದಲ್ಲಿ ಬೆಳವಣಿಗೆಯ ದಶಕವಾಗಿದೆ. ಅನೇಕ ತರುಣರು, ಸಾಹಸಿಗರು ಅನೇಕ ಪತ್ರಿಕೆಗಳನ್ನು ಪ್ರಾರಂಭಿಸಿದ ದಶಕ ಇದು. 1981ರಲ್ಲಿ ಗಂಧರ್ವಸೇನ ಅವರು ತಮ್ಮ ಸಂಪಾದಕತ್ವದಲ್ಲಿ ಆರಂಭಿಸಿದ 'ಪಬ್ಲಿಕ್' ಪತ್ರಿಕೆ ಬೀದರನ ಜನಪ್ರಿಯ ಪತ್ರಿಕೆಗಳಲ್ಲೊಂದು. ಪತ್ರಿಕೋದ್ಯಮವನ್ನು ಧ್ಯೇಯವಾಗಿಸಿಕೊಂಡು ಅವರು 'ಪಬ್ಲಿಕ್'ವನ್ನು ಆರಂಭಿಸಿರು. ಪತ್ರಿಕೆಯ ಹೆಸರು ಇಂಗ್ಲೀಷವಾಗಿದ್ದರು ಅದು ಕನ್ನಡ ದಿನ ಪತ್ರಿಕೆ. ಅದೇ ವರ್ಷ ಮಹಾಂತಸ್ವಾಮಿ ಅವರು 'ಪಲ್ಲವಿ' ಎಂಬ ಪತ್ರಿಕೆಯನ್ನು ಆರಂಭಿಸಿದರು ಅದು ಯಸೆಸಸ್ಸು ಕಾಣಲಿಲ್ಲ.

ಬೀದರ ಜಿಲ್ಲೆಯಲ್ಲಿ ಕನ್ನಡ ಪತ್ರಿಕೋದ್ಯಮಕ್ಕೆ ಮಹತ್ವದ ತಿರುವು ನೀಡಿದವರು ಶಿವಶರಣಪ್ಪವಾಲಿ ಅವರು. 1982ರಲ್ಲಿ ಅವರು ಆರಂಭಿಸಿದ 'ಉತ್ತರ ಕರ್ನಾಟಕ' ದಿನ ಪತ್ರಿಕೆ ಬೆಂಗಳೂರು ಮತ್ತು ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿದ್ದ ರಾಜ್ಯಮಟ್ಟದ ಕನ್ನಡ ದಿನ ಪತ್ರಿಕೆಗಳನ್ನು ಹೋಲುವ ತೀವ್ರ ಪ್ರಯತ್ನ ಮಾಡಿತು. ಆಫ್‌ಸೆಟ್ ಮುದ್ರಣದಲ್ಲಿ ಪ್ರಕಟವಾದ ಮೊಟ್ಟ ಮೊದಲ ಪತ್ರಿಕೆ ಇದಾಗಿದೆ. ದೊಡ್ಡಗಾತ್ರದ ನಾಲ್ಕು ಪುಟಗಳಲ್ಲಿ ಮುದ್ರಣವಾಗುವ 'ಉತ್ತರ ಕರ್ನಾಟಕ' ಆಧುನಿಕ ತಂತ್ರಜ್ಞಾನವನ್ನು ಜಿಲ್ಲಾ ಪತ್ರಿಕೋದ್ಯಮಕ್ಕೆ ಪರಿಚಯಿಸಿತು. ಪತ್ರಿಕೆಯ ಗಾತ್ರದಷ್ಟೇ ಅದರ ಒಳಹೂರಣ ಮತ್ತು ಗುಣಾತ್ಮಕತೆಗೆ ಇನ್ನಷ್ಟು ಕಾಳಜಿ ವಹಿಸಿದ್ದಲ್ಲಿ 'ಉತ್ತರ ಕರ್ನಾಟಕ' ಒಂದು ಅತ್ಯುತ್ತಮ ಪತ್ರಿಕೆಯಾಗಬಹುದಿತ್ತು ಎಂಬ ಭಾವನೆ ಅನೇಕರಲ್ಲಿದೆ.

ಕನ್ನಡ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದ ಈ ಪತ್ರಿಕೆ ಅತ್ಯಂತ ಪ್ರಖರವಾದ ಕನ್ನಡ ಪರ ಧೋರಣೆಯುಳ್ಳದ್ದು. ಹಲವು ದಶಕಗಳ ಹಿಂದೆಯೇ ಇಂತಹ ಧೋರಣೆಯ ಪತ್ರಿಕೆಯೊಂದು ಬೀದರ ಜಿಲ್ಲೆಗೆ ಅತ್ಯಾವಶ್ಯಕವಾಗಿತ್ತು. ತಡವಾಗಿ ಬಂದರೂ ಚಿಂತೆಯಿಲ್ಲ ಕನ್ನಡದ ಅಭಿವೃದ್ಧಿಗೆ ಪತ್ರಿಕೆ ಉತ್ತಮ ಕೊಡಗೆಯನ್ನು ನೀಡಿದೆ. ಗಡಿ ಭಾಗದಲ್ಲಿ 'ಉತ್ತರ ಕರ್ನಾಟಕ' ಕಾವಲು ನಾಯಿಯಂತೆ ನಿಂತುಕೊಂಡಿದೆ. ನಿರಂತರ ಕನ್ನಡ ಜಾಗೃತಿ ಅದರಿಂದ ಸಾಧ್ಯವಾಗಿದೆ.

ಮೊದಲು ನಾಲ್ಕು ಪುಟಗಳಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆ ಈಗ ಎಂಟು ಪುಟಗಳಲ್ಲಿ ಬರುತ್ತಿದೆ. ಬೀದರನಂತಹ ಚಿಕ್ಕ ಜಿಲ್ಲೆಯಲ್ಲಿ, ಕನ್ನಡಕ್ಕೆ ಪ್ರಾಶಸ್ತ್ಯ ಇಲ್ಲದಿದ್ದ ಪ್ರದೇಶದಲ್ಲಿ ಆಧುನಿಕ ತಂತ್ರಜ್ಞಾನದ ದೊಡ್ಡ ಪತ್ರಿಕೆಯನ್ನು ಆರಂಭಿಸಿದ ಕೀರ್ತಿ ಶಿವಶರಣಪ್ಪ ವಾಲಿ ಅವರಿಗೆ ಸಲ್ಲುತ್ತದೆ.

ಎಚ್.ಸಿ.ಖಿಡ್ಕೆ ಅವರು 1985ರಲ್ಲಿ 'ಖಿಡ್ಕೆ ಪತ್ರಿಕೆ' ಆರಂಭಿಸಿದರು. ಉತ್ತಮ ಗುಣಮಟ್ಟದ ಕಾಗದ ಹಾಗು ಮುದ್ರಣಕ್ಕೆ ಅವರು ಹೆಚ್ಚು ಪ್ರಾಶಸ್ತ್ಯ ನೀಡಿದರು. ಉತ್ತಮ ಪತ್ರಿಕೆ ತರುವ ಪ್ರಯತ್ನ ಅವರು ಮಾಡಿದರು.

ಓದುಗರಿಗೆ ಗುಣಾತ್ಮಕ ಪತ್ರಿಕೆ ನೀಡಬೇಕೆಂಬ ಕಳಕಳಿಯ ಪ್ರಯತ್ನ ಮಾಡಿದವರು ಎಸ್.ಕೆ.ಜೋಶಿ. ಅವರ 'ಜನಪರ' ಪತ್ರಿಕೆ 1986ರಲ್ಲಿ ಆರಂಭಗೊಂಡ ಮೇಲೆ ಒಂದು ಹೊಸ ಭರವಸೆಯನ್ನು ಮೂಡಿಸಿತ್ತು. ಜೋಶಿ ಅವರು ಒಳ್ಳೆಯ ಸುದ್ದಿಗಳನ್ನು ವಿಶ್ಲೇಷಣೆಗಳನ್ನು ನೀಡಲು ಬಹುವಾಗಿ ಶ್ರಮಿಸಿದರು.

ಅದೇ ವರ್ಷ ಗುರುನಾಥ ರೆಡ್ಡಿ ಅವರು ಬಸವಕಲ್ಯಾಣದಿಂದ 'ಬಹಿರಂಗ ಶುದ್ಧಿ' ಪತ್ರಿಕೆಯನ್ನು ಹೊರತಂದರು. ಶರಣ ಜೀವಿಗಳಾದ ಶ್ರೀ ಸಿದ್ಧರಾಮ ಬೆಲ್ದಾಳರು 'ಬಸವ ಭಾನು' ಎಂಬ ಮಾಸ ಪತ್ರಿಕೆಯನ್ನು 1987ರಲ್ಲಿ ಪ್ರಾರಂಭಿಸಿದರು. ಈ ಪತ್ರಿಕೆ ಬಸವಾದಿ ಶರಣರ ತತ್ವಪ್ರಸಾರ ಕೈಗೊಂಡಿದೆ.

ಹಮನಾಬಾದಿನಿಂದ ಜ್ಞಾನೇಶ್ವರ ಮಹಾರಾಜರು ಹೊರಡಿಸುತ್ತಿರುವ 'ಮಾಣಿಕ್ಯ ರತ್ನ' ಆಧ್ಯಾತ್ಮಿಕ ವಿಷಯಗಳಿಗೆ ಮೀಸಲಾದ ಪತ್ರಿಕೆಯಾಗಿದೆ.

1990ರ ದಶಕದಲ್ಲಿ ಪತ್ರಿಕೋದ್ಯಮದ ಬೆಳವಣಿಗೆಇನ್ನಷ್ಟು ರಭಸವನ್ನು ಕಂಡು ಕೊಂಡಿತು. ಸಮಾಜದ ಎಲ್ಲಾ ವರ್ಗದ ಜನತೆ ಪತ್ರಿಕಾ ವೃತ್ತಿಗೆ ಪ್ರವೇಶ ಮಾಡಿದ್ದು ಒಂದು ವಿಶೇಷ. ಒಂದು ರೀತಿಯಲ್ಲಿ ಬೀದರನಲ್ಲಿ ಪತ್ರಿಕಾ ಕ್ರಾಂತಿಯೇ ಶುರುವಾಗಿದೆ. ಆದರೆ ಈ ಕ್ರಾಂತಿ ಸಮಾಜದ ಪ್ರಗತಿಗೆ, ಒಳಿತಿಗೆ ಎಷ್ಟೊಂದು ಪೂರಕ ಮತ್ತು ಉಪಯುಕ್ತಕಾರಿ ಎಂಬುದು ಚರ್ಚಾಸ್ಪದವಾಗಿಯೇ ಉಳಿಯುತ್ತದೆ.

ಅತ್ಯಂತ ಹೆಚ್ಚಿನ ಪತ್ರಿಕೆ ಹೊಂದಿರುವ ಕೆಲವೇ ಜಿಲ್ಲೆಗಳಲ್ಲಿ ಬೀದರ ಒಂದಾಗಿದೆ. ಕೆಲವು ಪತ್ರಿಕೆಗಳಾದರೂ ಸಮಾಜಮುಖಿಯಾಗಿ ಕೆಲಸ ಮಾಡಿರುವುದು ಸಮಾಧಾನಕರ ಸಂಗತಿ. ಆದರೆ ಅನೇಕ ಪತ್ರಿಕೆಗಳು ಪತ್ರಿಕೋದ್ಯಮದ ಮೂಲ ಧ್ಯೇಯವಾದ ಸಮಾಜ ಸೇವೆಯನ್ನು ತ್ಯಾಗ ಮಾಡಿರುವುದನ್ನು ಮರೆಮಾಚಲಾಗುವುದಿಲ್ಲ. ಪತ್ರಿಕೆಗಳು ಬೆಳೆದರಷ್ಟೇ ಸಾಲದು ಉತ್ತಮ ಪತ್ರಿಕೆಗಳು ಬೆಳೆದು ಬರಬೇಕು. ಮತ್ತು ಈ ಉತ್ತಮ ಪತ್ರಿಕೋದ್ಯಮದ ಪ್ರಗತಿ ಸುಸ್ಥಿರವಾಗಿರಬೇಕು. ಆದರೆ ಅಂತಹ ಲಕ್ಷಣ ಬೀದರ ಜಿಲ್ಲೆಯಲ್ಲಿ ಕಂಡುಬಾರದಿರುವುದು ಕಳವಳಕಾರಿಯಾದ ಸಂಗತಿಯಾಗಿದೆ.

ಬೀದರ ಜಿಲ್ಲೆಯಲ್ಲಿ ಒಟ್ಟು 69 ವಿವಿಧ ಭಾಷೆಯ, ವಿವಿಧ ರೀತಿಯ ಪತ್ರಿಕೆಗಳು ಪ್ರಕಟವಾಗುತ್ತವೆ. ಇವುಗಳಲ್ಲಿ ದೈನಿಕ, ಸಾಪ್ತಾಹಿಕ, ಪಾಕ್ಷಿಕ, ಮಾಸಿಕ ಮತ್ತು ಇತರ ನಿಯತಕಾಲಿಕೆಗಳು

ಸೇರಿವೆ. ಕನ್ನಡ ಪತ್ರಿಕೆಗಳ ಸಂಖ್ಯೆ ಗಣನೀಯವಾಗಿದ್ದರೂ ಅದರ ನಂತರದ ಸ್ಥಾನ ಲಭ್ಯವಾಗುವುದು ಹಿಂದಿ ಪತ್ರಿಕೆಗಳಿಗೆ, ಹಿಂದಿ ಪತ್ರಿಕೋದ್ಯಮ ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಳೆದು ಬಂದಿರುವುದು ವಿಶೇಷ. ಕನ್ನಡ, ಹಿಂದಿ, ಉರ್ದು, ಮರಾಠಿ, ಇಂಗ್ಲೀಷ ಹೀಗೆ ವಿವಿಧ ಭಾಷೇಯ ಪತ್ರಿಕೆಗಳು ಬೀದರ ನೆಲದಲ್ಲಿ ನೆಲೆಕಂಡಿವೆ. ಇವುಗಳಲ್ಲಿ ಕೆಲವು ದ್ವಿಭಾಷಾ ಪತ್ರಿಕೆಗಳಾಗಿದ್ದರೆ ಕೆಲವು ಬಹುಭಾಷಾ ಪತ್ರಿಕೆಗಳೂ ಇವೆ. ಬೀದರಿನಿಂದ ಪ್ರಕಟವಾಗುವ ವಿವಿಧ ಭಾಷೆಯ ಪತ್ರಿಕೆಗಳು 2008 ವೃತ್ತ ಪತ್ರಿಕೆಗಳ ನೊಂದಣಿ ಪ್ರಕಾರ ಪ್ರಕಾಶನಗೊಳ್ಳುತ್ತಿರುವ ಒಟ್ಟು ಪತ್ರಿಕೆಗಳು 69. ಕನ್ನಡ 42, ಹಿಂದಿ 12, ಉರ್ದು 7, ಇಂಗ್ಲೀಷ 2, ಮರಾಠಿ 1, ದ್ವಿಭಾಷಾಪತ್ರಿಕೆ 3, ಹಾಗೂ ಬಹುಭಾಷಾಪತ್ರಿಕೆ 2. ಪತ್ರಿಕೆಗಳಿವೆ.

ಕನ್ನಡ ಪತ್ರಿಕೆಗಳು: ಬೀದರ ಜಿಲ್ಲೆಯಲ್ಲಿ ಪ್ರಕಟವಾಗುವ ಕನ್ನಡ ಪತ್ರಿಕೆಗಳ ಸಂಖ್ಯೆ 42. ಇವುಗಳಲ್ಲಿ 26 ದೈನಿಕ, ಮೂರು ಸಾಪ್ತಾಹಿಕ, ಒಂದು ಪಾಕ್ಷಿಕ ಮತ್ತು ನಾಲ್ಕು ಮಾಸಿಕಗಳಿವೆ.

**ದಿನಪತ್ರಿಕೆಗಳು :** ಅಶೋಕ ಕೋಟೆ, ಬಸವ ದನಿ, ಬೀದರ ಹುಲಿ, ಬೀದರ ಕ್ರಾಂತಿ, ಬೀದರ ರಾಜಣ್ಣ, ಬೀದರ ಸಂಪರ್ಕ, ದೃಷ್ಟಿ, ಜನದನಿ, ಜನ ಕಲ್ಯಾಣ, ಜನಪರ, ಜನರವಾಣಿ, ಕಲ್ಯಾಣ ಧ್ವನಿ,ಕಾರಂಜಾ ಎಕ್ಸ ಪ್ರೆಸ್, ಕೆಂಪುಭೂಮಿ, ಮಲ್ಲಿಕಾರ್ಜುನ ಸ್ವಾಮಿ ಜನಧ್ವನಿ, ಮಾಂಜರಾ ಎಕ್ಸ ಪ್ರೆಸ್, ನಾರಂಜಾ ಎಕ್ಸಪ್ರೆಸ್, ಪರಿಹಾರ, ಪ್ರಜ್ಞವಾಣಿ, ಪ್ರಜಾ ಚಳುವಳಿ, ಪಬ್ಲಿಕ್, ರಾಜೋಳ ಸಂಘರ್ಷ ಪತ್ರಿಕಾ, ಸಮೃದ್ಧ ಭಾರತ, ಸಂಜೆ ಅಂತರಂಗ ಶುದ್ಧಿ, ಶೋಧವಾಣಿ, ಶ್ರೀ ಭವಲಿಂಗ ವಾಣಿ, ಉಸೂಲ್, ವಿಜಯ ದನಿ, ಯುವರಂಗ ಮತ್ತು ಉತ್ತರ ಕರ್ನಾಟಕ

ವಾರಪತ್ರಿಕೆಗಳು: ಬೀದರ ಟೈಮ್ಸ್, ಬೀದರ ರಕ್ಷಕ, ಕನ್ನಡಾಂಬೆ. 'ಬಹುಜನ ದೂತ' ಎಂಬುದು ಜಿಲ್ಲೆಯ ಏಕೈಕ ಕನ್ನಡ ಪಾಕ್ಷಿಕ, ನಾಲ್ಕು ಮಾಸ ಪತ್ರಿಕೆಗಳು ಪ್ರಕಟವಾಗುತ್ತಿದ್ದುಅವುಗಳೆಂದರೆ: ಆರೋಗ್ಯ ಸಿರಿ, ಬಹುಜನ ನಿಮ್ಮೊಂದಿಗೆ, ಬೀದರ ಸಹಕಾರ, ಶಾಂತಿ ಕಿರಣ.

ಕನ್ನಡದ ಇತರ ನಿಯತ ಕಾಲಿಕಗಳೆಂದರೆ: ಬೀದರ ರಹಸ್ಯ, ಈ ಸೂರ್ಯಸ್ತ, ಶೇಖರ ಪತ್ರಿಕೆ, ವಚನ ಕ್ರಾಂತಿ.

ಹಿಂದಿ ಪತ್ರಿಕೆಗಳು: ಬೀದರನಿಂದ ಪ್ರಕಟವಾಗುವ 12 ಹಿಂದಿ ಪತ್ರಿಕೆಗಳ ಪೈಕಿ ಹತ್ತು ದಿನ ಪತ್ರಿಕೆ ಮತ್ತು ಎರಡು ವಾರ ಪತ್ರಿಕೆಗಳು ಸೇರಿವೆ. ಪ್ರಾಯಃ ಕರ್ನಾಟಕದ ಯಾವುದೇ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಹಿಂದಿ ಪತ್ರಿಕೆಗಳು ನೊಂದಾಯಿಸಿದ್ದರೆ ಅದು ಬೀದರನಲ್ಲಿ. ಹಿಂದಿ ಭಾಷಿಕರ ಸಂಖ್ಯೆ ಇಲ್ಲಿ ಅಧಿಕವಾಗಿದ್ದು ಅದಕ್ಕೆ ಕೆಲವು ಚಾರಿತ್ರಕ ಕಾರಣಗಳಿದ್ದಿರಲೂಬಹುದು.

ಹಿಂದಿ ದಿನ ಪತ್ರಿಕೆಗಳು: ಆದಿತ್ಯ, ಬೀದರ ಜಾಗೃತಿ, ಬೀದರ ಕಿ ಆವಾಜ, ಬೀದರ ಸಂದೇಶ, ಬೀದರ ವಾರ್ತಾ, ಡೆಕ್ಕನ್ ದೇಶ್, ಮನಸುಬಾ ಡೇಲಿ, ನಾನಕ್ ಟೈಮ್ಸು, ಪ್ರಗತಿಶೀಲ ಬೀದರ, ಶಕ್ತಿವಾಹಿನಿ.

**ಸಾಪ್ತಾಹಿಕಗಳು:** ಬಂಜಾರ ಗರ್ಜನೆ, ಉದ್ಯೋಗವಾಣಿ.

**ಆಂಗ್ಲ ಭಾಷಾ ಪತ್ರಿಕೆಗಳೆಂದರೆ:** ಇಂಡಿಪೆಂಡೆಂಟ್ ಸ್ಪಿರೀಟ್, ಇ(ಎ)ಂಕೆ ಶಾಪ್, ಇವೆರಡು ದಿನಪತ್ರಿಕೆಗಳು.

ಈ ಜಿಲ್ಲೆಯಿಂದ ಪ್ರಕಟವಾಗುವ ಏಕೈಕ ಮರಾಠಿ ಪತ್ರಿಕೆ 'ಸೀಮಾ ವಾರ್ತಾ' ವಾರ ಪತ್ರಿಕೆ.

ಇಲ್ಲಿರುವ ಮೂರು ದ್ವಿಭಾಷಾ ಪತ್ರಿಕೆಗಳು ದಿನಪತ್ರಿಕೆಗಳಾಗಿದ್ದು ಅವುಗಳೆಂದರೆ: ಬೀದರ ಚಳವಳಿ, ಬೀದರ ಜಂಗ್, ಮಹಾಕಾಯಸ್. ಎರಡು ಬಹುಭಾಷಾ ಪತ್ರಿಕೆಗಳು ಮಾಸ ಪತ್ರಿಕೆಗಳೀದ್ದು ಅವುಗಳೆಂದರೆ ಪ್ರೇಮಸ್ಪರ್ಶ ಮತ್ತು ದಿ ಪಬ್ಲಿಕ್ ಕೈನ್ಸಿಲ್.

**ಗ್ರಂಥ ಋಣ**


1. ಭಾರತೀಯ ಪತ್ರಿಕೋದ್ಯಮ – ನಾಡಗ ಕೃಷ್ಣಮೂರ್ತಿ.
2. ವೃತ್ತಪತ್ರಿಕೆ, ಅದರ ಚರಿತ್ರೆ, ಅದರ ಕರ್ತವ್ಯ, ಅದರ ಸ್ವಾತಂತ್ರ್ಯ–ಡಿ.ವಿ.ಜಿ
3. ಮುದ್ರಣ ಸಮೀಕ್ಷೆ – ಎಚ್, ನರಸಣ್ಣ
4. ನೂತನ ಮುದ್ರಣ ವಿಧಾನಗಳು – ಬಿ. ಪಿ. ಮಲ್ಲರಾಜ ಅರಸು.
5. ಕನ್ನಡ ಪತ್ರಿಕೆಗಳು – ಡಾ. ಪ್ರಭು ಖಾನಾಪುರೆ; ಕಲ್ಬುರ್ಗಿ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯೆಲಯ.
6. ಕನ್ನಡ ಪತ್ರಿಕೆಗಳು – ಡಾ. ಈ. ಬಿ ವಿಸಾಜಿ; ಬೀದರ್ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯೆಲಯ.
7. ಪತ್ರಿಕೋಧ್ಯಮ; ಸಾಧನೆ ಮತ್ತು ಸವಾಲುಗಳು – ಬಸವರಾಜ ಆಕಳವಾಡಿ ಕೊಪ್ಪಳ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯಾಲಯ.
8. ಹೈದ್ರಾಬಾದ್ ಕರ್ನಾಟಕದ –ಕನ್ನಡ ಪತ್ರಿಕೋಧ್ಯಮದ ಕತೆ – ಪ್ರೋ. ವಸಂತ ಕುಶ್ಟಗಿ, ಸಂಯುಕ್ತ ಕರ್ನಾಟಕ;
9. ಹೈದ್ರಾಬಾದ್ ಕರ್ನಾಟಕದ ಕನ್ನಡ ಪತ್ರಿಕೋಧ್ಯಮ – ಒಂದು ನೋಟ; ಶ್ರೀನಿವಾಸ ಗಟ್ಟು; 'ತಿರುಳ್ಗನ್ನಟ' ಸ್ಮರಣ ಸಂಚಿಕೆ, ಅಖಿಲ ಭರತ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ.
10. ಹೈದ್ರಾಬಾದ್ ಕರ್ನಾಟಕ ಹಾಗೂ ಪಂಡಿತ ತಾರಾನಾಥರು – ಡಾ. ಎನ್ ಎ. ಪಾಟಿಲ್.
11. ಅಶೋಕನ ಧರ್ಮ ಶಾಸನಗಳು – ಡಾ. ಶ್ರೀನಿವಾಸ ರಿತ್ತಿ.
12. ಕನ್ನಡನಾಡಿನ ಶಾಸನಗಳು – ಡಾ. ಪಿ. ಬಿ. ದೇಸಾಯಿ
13. ಕಿರಿಯರ ಕರ್ನಾಟಕ (ಯುವಕರ ವಿಶ್ವಕೋಶ) – ಕನ್ನಡ ವಿಶ್ವವಿದ್ಯಾಲಯ, ಹಂಪ್ಪಿ
14. ಗುಲ್ಬರ್ಗಾ ಜಿಲ್ಲಾ ಗ್ಯಾಸ್‌ಟಿಯರ್.